**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಖಾನಾಪೂರ.**

**ಸಿ.ಸಿ ನಂ:** 1378/2018

ಪಿ.ಡಬ್ಲ್ಯೂ - 4

ಸಿ.ಡಬ್ಲ್ಯೂ - 6

ಹೆಸರು : ಸುರೇಶ ಲಕ್ಷ್ಮಣ ಖಾನಾಪೂರೆ

ವಯಸ್ಸು : 40 ವರ್ಷ

ಉದ್ಯೋಗ : ಕೂಲಿ ಕೆಲಸ,

ವಾಸ : ಹಲಕರ್ಣಿ , ತಾಃ ಖಾನಾಪೂರ

ದಿನಾಂಕ 16-09-2025 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸಸಅ ರವರಿಂದ

ಚಾಸಾ 07 ನನಗೆ ಪರಿಚಯ.

ಸಾಕ್ಷಿದಾರರಿಗೆ ಈಗ ಜಪ್ತ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರನ್ನು ನಿ.ಪಿ.9 ಎಂದು , ಸಾಕ್ಷಿದಾರ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಸದಿರಿ ಸಹಿಯನ್ನು 23.12. 2017 ರಲ್ಲಿ ಖಾನಾಪೂರ ಪೊಲೀಸ ಠಾಣೆಯಲ್ಲಿ ಮಾಡಿರುತ್ತೇನೆ. ಸಂಜೆ 06.00 ಗಂಟೆಗೆ ಪೊಲೀಸರು ನನಗೆ ಫೋನ ಮಾಡಿ ಪಂಚನಾಮೆಗೋಸ್ಕರ ಠಾಣೆಗೆ ಬರಲು ಹೇಳಿದ್ದರು. ಆ ಪ್ರಕಾರ ನಾನು ಪೊಲೀಸ ಠಾಣೆಗೆ ಸಂಜೆ 06.00 ಗಂಟೆಗೆ ಹೋದೆನು. ಸಾಕ್ಷಿದಾರರು ಆರೋಪಿತರನ್ನು ವಿಸಿ ಮೂಲಕ ಗುರುತಿಸಿ ಆ ದಿನ ಈ ಆರೋಪಿತರು ಠಾಣೆಯಲ್ಲಿ ಇದ್ದರು ಎಂದು ನುಡಿಯುತ್ತಾರೆ. ಅಲ್ಲಿ ಎರಡು ಬಂಗಾರದ ಚೈನ, ಒಂದು ಬಂಗಾರದ ಕಿವಿಯ ಹೂವು ಇತ್ತು. ನನ್ನ ಮುಂದೆ ಪಂಚನಾಮೆ ಮಾಡಿರುತ್ತಾರೆ. ಸದರಿ ಬಂಗಾರದ ಚೈನ ಯಾರದ್ದು , ಯಾರು ಯಾರಿಗೆ ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಒಂದು ಫೋಟೋವನ್ನು

ತೆಗೆದಿರುತ್ತಾರೆ. ಸದರಿ ಫೋಟೋವನ್ನು ಸಾಕ್ಷಿದಾರರು ಗುರುತಿಸಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು. ಸದರಿ ಫೋಟೋದಲ್ಲಿ ಬಲದಿಂದ ಎರಡನೆಯದವನು ನಾನೇ ಎಂದು ನುಡಿದಿರುತ್ತಾರೆ. ನನ್ನ ಜೊತೆ ಚಾಸಾ 7 ರವರು ಕೂಡ ಪಂಚರಾಗಿ ಬಂದಿದ್ದರು. ಸಾಕ್ಷಿದಾರರು ನಿಪಿ-1 ನ್ನು ನೋಡಿ ನನಗೆ ಅದೇ ಚೈನ ಎಂದು ಈಗ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.